**3 ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಗಳ ನ್ಯಾಯಾಲಯ,**

**ಬೆಂಗಳೂರು ನಗರ.**

**ಸಿಸಿ. 7766/2014**

**ಚಾಸಾ- 2 ಪ್ರಾಸಾ- 2**

| | |
|---|---|
| **ಸಾಕ್ಷಿದಾರರ ಹೆಸರು** | ಚೇತನ್ |
| **ತಂದೆಯ ಹೆಸರು** | ಅಣ್ಣೆಗೌಡ ಅಲಿಯಾಸ್ ಅಣ್ಣಪ್ಪ ಗೌಡ |
| **ವಯಸ್ಸು** | 35 ವರ್ಷ |
| **ಉದ್ಯೋಗ** | ಖಾಸಗಿ ಕಂಪನಿಯಲ್ಲಿ ಕೆಲಸ |
| **ವಾಸ** | ರಾಜಾಜಿನಗರ |
| **ಪ್ರಮಾಣೀಕರಿಸಿದ ದಿನಾಂಕ** | 02.03.2024 |

**ಮುಖ್ಯ ವಿಚಾರಣೆ : ಶ್ರೀ.ಎಂ.ಬಿ.ಆರ್. ವಿಶೇಷ ಅಭಿಯೋಜಕರವರಿಂದ :**

ನ್ಯಾಯಾಲಯದ ಮುಂದೆ ಇರುವ ಆರೋಪಿ ಪಾರ್ವತಿ ಮತ್ತು ಭಸ್ಕರ್ ಇರುತ್ತಾರೆ ಅವರ ಪರಿಚಯ ನನಗೆ ಇರುತ್ತದೆ. ನಾನು 2005 ರಿಂದ ಇಲ್ಲಿಯವರೆಗೂ ಮ್ಯಾಕ್ಸ್ ಮೋಟಾರ್ಸ್ ನಲ್ಲಿ ಕೆಲಸ ಮಾಡುತ್ತಿದ್ದೇನೆ. ಮೊದಲು ಡಿಎಸ್ ಸಿ ಅಂತ ಕೆಲಸ ಮಾಡಿದ್ದೆ ಈಗ ಮ್ಯಾನೇಜರ್ ಆಗಿ ಕೆಲಸ ಮಾಡುತ್ತಿದ್ದೇನೆ. ನಮ್ಮ ಕಂಪನಿ ನಂ.2/6, ಡಾ.ರಾಜ್ ಕುಮಾರ್ ರಸ್ತೆ, ರಾಜಾಜಿನಗದರಲ್ಲಿರುತ್ತದೆ. 2011 ರಲ್ಲಿ ಅವಿಜಿತ್ ದೇವಾಜ್ ರವರು ಸದರಿ ಕಂಪನಿಯ ಮಾಲೀಕರಾಗಿದ್ದರು. ಒಂದನೇ ಆರೋಪಿ ಪಾರ್ವತಿ ಕ್ಯಾಶಿಯರ್ ಆಗಿ ಮತ್ತು ಎರಡನೇ ಆರೋಪಿ ಅಕೌಂಟೆಂಟ್ ಕಾಮ್ ಜನರಲ್ ಮ್ಯಾನೇಜರ್ ಆಗಿ ಕೆಲಸ ಮಾಡುತ್ತಿದ್ದರು.

2. ಮ್ಯಾಕ್ಸ್ ಮೋಟಾರ್ಸ್ ಗೆ ದಿ.15.09.2011 ರಂದು ಪೊಲೀಸರು ಬಂದಿದ್ದರು. ನನಗೆ ಪಂಚನಾಮೆಗೆ ಅಂತ ಕರೆದಿದ್ದರು. ಅಲ್ಲಿ ಮಹಜರ್ ಮಾಡಿ ನನ್ನ ಸಹಿ ಪಡೆದುಕೊಂಡಿರುತ್ತಾರೆ. ನನ್ನ ಸಹಿಯನ್ನು ನೋಡಿದರೇ ಗುರುತಿಸುತ್ತೇನೆ. ಈಗ ನಾನು ನೋಡುತ್ತಿರುವ ದಾಖಲೆಯಲ್ಲಿ ನನ್ನ ಸಹಿ ಇರುತ್ತದೆ. ಅದು ಮಹಜರ್ ಆಗಿದ್ದು ಅದನ್ನು ಈಗಾಗಲೇ ನಿಪಿ.2 ಎಂದು ಗುರುತಿಸಿದ್ದು, ಸಾಕ್ಷಿ ಸಹಿಯನ್ನು ನಿಪಿ.2(ಬಿ) ಎಂದು ಗುರುತಿಸಲಾಯಿತು. ನನ್ನ ಜೊತೆ ವಿಜಯ್ ಕುಮಾರ್ ಎನ್ನುವವರು ಸಹ ಇದ್ದರು ಮತ್ತು ದೂರುದಾರರ ಅವಿಜಿತ್ ರವರು ಸಹ ಇದ್ದರು. ಸದರಿ ಚೆಕ್ಕು ಬಂಧಿ ಹೇಳಲು

ಬರುತ್ತದೆ . ಪೂರ್ವಕ್ಕೆ ಸರ್ವಿಸ್ ರಸ್ತೆ ಇರುತ್ತದೆ. ಪಶ್ಚಿಮಕ್ಕೆ ರಾಜ್ ಕುಮಾರ್ ರಸ್ತೆ, ಉತ್ತರಕ್ಕೆ ಒಂದು ರಿಸರ್ಚ್ ಕಂಪನಿ ಇರುತ್ತದೆ ಮತ್ತು ದಕ್ಷಿಣಕ್ಕೆ ಅಭಿಮಾನಿ ಹೋಟೆಲ್ ಇರುತ್ತದೆ. ಈ ಪಂಚನಾಮೆಯನ್ನು 12.30 ರಿಂದ 01.30 ವರೆಗೆ ಮಾಡಿರುತ್ತಾರೆ. ಮಹಜರ್ ನಲ್ಲಿ ಆರೋಪಿತರು ರೂ.1,31,00,000/- ಮತ್ತು ಚಿಲ್ಲರೇ ಹಣವನ್ನು ದುರುಪಯೋಗ ಪಡಿಸಿಕೊಂಡಿರುತ್ತಾರೆ ಎಂದು ಹೇಳಿರುತ್ತಾರೆ. ಪಂಚನಾಮೆ ಮಾಡಿದ ಸ್ಥಳದಲ್ಲಿ ವಾಹನಗಳ ಡಿಸ್ ಪ್ಲೇ, ಕಂಪ್ಯೂಟರ್, ಕುರ್ಚಿಗಳು ಇದ್ದವು. ಒಂದನೇ ಆರೋಪಿ ಕ್ಯಾಶ್ ಕೌಂಟರ್ ನಲ್ಲಿ ಕೂರಿತ್ತಿದ್ದರು. ಸದರಿ ಕ್ಯಾಶ್ ಕೌಂಟರ್ ಶೋ ರೂಮ್ ನ ಕೊನೆಯ ಭಾಗದಲ್ಲಿತ್ತು. ಆರೋಪಿತರು ಈಗ ಕಂಪನಿಯಲ್ಲಿ ಇರುವುದಿಲ್ಲ.

**ಪಾಟೀ ಸವಾಲು : ಶ್ರೀಮತಿ. ವಕೀಲರಿಂದ ಆರೋಪಿ ಪರ ವಕೀಲರು ಕಾಲವಕಾಶ ಕೋರಿದ್ದು ಮಧ್ಯಾಹ್ನ 02.45 ಗಂಟೆಗೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯ್ತು.)

**ಓ.ಹೇ.ಕೇ.ಸ.ಇದೆ**

**3 ನೇ ಎ.ಸಿ.ಎಮ್.ಎಮ್.ನ್ಯಾ.**

**ಬೆಂಗಳೂರು.**

**ಸಾಕ್ಷಿಯನ್ನು ಪುನಃ ಕರೆದು ಪ್ರಮಾಣ ಬೋದಿಸಲಾಯಿತು.**

**ಪಾಟೀ ಸವಾಲು : ಶ್ರೀ. ಎಸ್ ಆರ್ ಎನ್ ವಕೀಲರಿಂದ ಒಂದನೇ ಆರೋಪಿ ಪರ**

ಸದರಿ ನಿಪಿ.2 ರ ಮೇಲೆ ಸಹಿಯನ್ನು ಠಾಣೆಗೆ ಹಾಕಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಸಹಿಯನ್ನು ನಾನು ಶೋರೂಮ್ ಒಳಗೆ 12.30 ರಿಂದ 01.30 ರವರೆಗೆ ಹಾಕಿರುತ್ತೇನೆ. ಪೊಲೀಸರು 12.30 ಕ್ಕೆ ಮಹಜರ್ ಮಾಡಲು ಬಂದಿದ್ದರು. ನಾನು ಶೋ ರೂಮ್ ನಲ್ಲಿಯೇ ಇದ್ದೆ. ಮಹಜರ್ ಮಾಡಿದ ಪೂರ್ವ ಭಾಗಕ್ಕೆ ಸರ್ವೀಸ್ ರಸ್ತೆ ಇರುತ್ತದೆ. ಕ್ಯಾಶಿಯರ್ ಕ್ಯಾಂಬಿನ್ ಎಷ್ಟು ಅಡಿ ಇರುತ್ತದೆ ಎಂದು ನೆನಪಿಲ್ಲ. ಆದರೆ ಸಾಕ್ಷಿ 4x6 ಅಡಿ ಇರಬಹುದು ಎಂದು ಹೇಳುತ್ತಾರೆ. ಪೊಲೀಸರು ನಮಗೆ ನೋಟಿಸ್ ನೀಡಿರಲಿಲ್ಲ. ನಾನು ಅಲ್ಲಿಯೆ ಇದ್ದೆ ಅವರು ಕರೆದಿರುತ್ತಾರೆ. ಚಾಸಾ-1 ರವರಿಗೆ ನಾನು ಆತ್ಮೀಯವಾಗಿದ್ದರಿಂದ

ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಯಾವುದೇ ಸ್ಥಳ ಪಂಚನಾಮೆ ನಡೆದಿಲ್ಲ ಎಂದರೆ ಸರಿಯಲ್ಲ.

**ಪಾಟೀಸವಾಲು . ಶ್ರೀಮತಿ. ಎಲ್ ಕೆ, ಎರಡನೇ ಆರೋಪಿ ಪರ**

ಒಂದನೇ ಆರೋಪಿ ಪರ ವಕೀಲರು ಮಾಡಿರುವ ಪಾಟೀಸವಾಲನ್ನು ಅಳವಡಿಸಿಕೊಂಡಿರುತ್ತಾರೆ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯ್ತು.)

**ಓ.ಹೇ.ಕೇ.ಸ.ಇದೆ**

**3 ನೇ ಎ.ಸಿ.ಎಮ್.ಎಮ್.ನ್ಯಾ.**

**ಬೆಂಗಳೂರು.**